Reg. No.

# BSCKAL 281/BIDKAL 281/BFDKAL 281/BSCKAL 254/FNDKAL 254/ BFTKAL 254/HRDKAL 254/BFTKAL 281/BCAKAL 281/FNDKAL 281

**Choice Based Credit System/Credit Based IV Semester B.Sc./B.Sc. (ID & D)/ B.Sc. (FD)/B.Sc.(FND)/B.Sc.(FT)/B.A. (HRD)/B.C.A. Examination, September 2022**
**(2020 – 21 and Earlier Batches)**
**Paper – IV : KANNADA LANGUAGE**

Time : 3 Hours Max. Marks : 80

I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಸಂಧಿಯಾಗಬಹುದೆಂದು ಸಂಶಯಪಟ್ಟ ದ್ರೌಪದಿಯನ್ನು ಭೀಮನು ಸಂತೈಸಿದ ಬಗೆಯನ್ನು ತಿಳಿಸಿ.

**ಅಥವಾ**

ಭಾರತದ ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳನ್ನು 'ಕಳಕೊಂಡವರು' ಕವನ ಹೇಗೆ ನಿರೂಪಿಸಿದೆ ? ವಿವರಿಸಿ.

2) ಆನಂದಿ ಬಾಯಿ ಜೋಶಿಯವರ ಹೋರಾಟದ ಬದುಕನ್ನು ವಿವರಿಸಿ.

**ಅಥವಾ**

ಜೀವ ವೈವಿಧ್ಯವು ಎಷ್ಟು ಮುಖ್ಯವೋ ಭಾಷಾ ವೈವಿಧ್ಯವೂ ಅಷ್ಟೇ ಮುಖ್ಯ. ಹೇಗೆ ? ವಿವರಿಸಿ.

3) ಜನಕ ಮಹಾರಾಜನು ತನ್ನ ಮಕ್ಕಳ ಮದುವೆಯ ಸಿದ್ಧತೆಯನ್ನು ಮಾಡಿದ ಬಗೆಯನ್ನು ತಿಳಿಸಿ.

**ಅಥವಾ**

ತುಳುನಾಡಿನ ಸಂಪ್ರದಾಯ, ಆಭರಣ ಇತ್ಯಾದಿಗಳನ್ನು ಕಾವ್ಯವು ಒಳಗೊಂಡ ಬಗೆಯನ್ನು ಚರ್ಚಿಸಿ.

II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ಜ್ಞಾನಿಯ ಸ್ವರೂಪವನ್ನು ಸರ್ವಜ್ಞನು ಹೇಗೆ ಅಭಿವ್ಯಕ್ತಿಸಿದ್ದಾನೆ ?

**ಅಥವಾ**

ಹೆಣ್ಣಿನ ಕುರಿತಾದ ಗ್ರಹಿಕೆಗಳು 'ಪುಣ್ಯದ ಜೀವ' ಕವನದಲ್ಲಿ ಹೇಗೆ ಮೂಡಿಬಂದಿದೆ ?

2) ರೈತನ ಕತೆಯು ಝೂನ್ ಸಿದ್ಧಾಂತವನ್ನು ಹೇಗೆ ಅಭಿವ್ಯಕ್ತಪಡಿಸಿದೆ ?

**ಅಥವಾ**

'ಆಹುತಿ' ಕತೆಯ ಆಶಯವೇನು ?

3) ಸ್ವಯಂವರ ಸಂದರ್ಭದಲ್ಲಿ ಅತಿಕಾಯ–ಇಂದ್ರಜಿತು ವರ್ತಿಸಿದ ಬಗೆಯನ್ನು ತಿಳಿಸಿ.

**ಅಥವಾ**

'ಮದುವೆಯ ಹಂದರ' ಕಾವ್ಯಭಾಗದಲ್ಲಿ ಪ್ರಾದೇಶಿಕತೆಯು ಅನಾವರಣಗೊಂಡ ಬಗೆಯನ್ನು ವಿವರಿಸಿ.

III. ಕೆಳಗಿನ **ಒಂದು** ಪದ್ಯದ ಸಂದರ್ಭ ಹಾಗೂ ಭಾವಾರ್ಥದೊಂದಿಗೆ ಸ್ವಾರಸ್ಯವನ್ನು ವಿವರಿಸಿ. **(1×5=5)**

ಸಮವಾಯಮಹಿತರೊಳ್ ಸಂ
ಧಿ ಮಾಡೆ ಯಮಸೂನು ಪೇಳ್ ವನವಾಸವೆ ದಲ್
ನಿಮಗೆ ಶರಣೆನಗಮಂದ
ಗ್ನಿಮುಖದೆ ಪುಟ್ಟಿದುದರಿಂದೆ ಶರಣಗ್ನಿಮುಖಂ

**ಅಥವಾ**

ಜಾತಿ ಜಾತಿಗೆ ವೈರ ನೀತಿ ಮೂರ್ಖಗೆ ವೈರ
ಪಾತಕ ವೈರ ಸಜ್ಜನರಿಗೆ ಅರಿದವಗೆ
ಏತರ ವೈರ ಸರ್ವಜ್ಞ

IV. ಅ) **ಎರಡು** ಪ್ರಶ್ನೆಗಳಿಗೆ ಸಂದರ್ಭ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) ಆನೆ ನೀರಾಟದಲಿ ಮೀನ ಕಂಡಂಜುವುದೆ.
2) ಕಳಕೊಂಡವರು ನಾವು ಶುದ್ಧ ಭಾಷಿಗರನ್ನು.
3) ಶೋಷಿತರ ಹಕ್ಕುಗಳಿಗಾಗಿ ಹೋರಾಡುತ್ತೇನೆ.
4) ಎರಡು ಚಕ್ರದ ಗಾಡಿ ಜೀವನದುದ್ದಕ್ಕೂ ಬೇಕನ್ನೇ.

ಆ) ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಕೊಡಗಿನ ಗೌರಮ್ಮ.
2) ಝುನ್ ಬುದ್ಧಿಸಂನ ಬಾಂಕಿ ಗುರು.
3) ಓ.ಎಲ್. ನಾಗಭೂಷಣ ಸ್ವಾಮಿ.
4) ನಾಗಸಾಕಿ.

ಇ) ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ರಾಮ.
2) ಅತಿಕಾಯ.
3) ವಿಶ್ವಾಮಿತ್ರ.
4) ಲಕ್ಷ್ಮಣ.

**BSCKAL 281/BIDKAL 281/BFDKAL 281/BSCKAL 254/FNDKAL 254/BFTKAL 254/ HRDKAL 254/BFTKAL 281/BCAKAL 281/FNDKAL 281**

V. ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ. **(1×12=12)**

1) ರನ್ನನ ಜನ್ಮಸ್ಥಳ ಯಾವುದು ?

2) ಚುಕ್ಕಿ ಕವನಸಂಕಲನವನ್ನು ಬರೆದವರು ಯಾರು ?

3) ಮಂಜು ಕೋಡಿಉಗನೆ ಸ್ಥಾಪಿಸಿದ ಪ್ರಕಾಶನ ಸಂಸ್ಥೆ ಯಾವುದು ?

4) 'ಪುಣ್ಯದ ಜೀವ' ಹವ್ಯಕ ಕವನವನ್ನು ಅನುವಾದ ಮಾಡಿದವರು ಯಾರು ?

5) ಶುಕ್ರನ ಮೇಲಿನ ಹೊಂಡಕ್ಕೆ ಆನಂದಿಯ ನೆನಪಿನಲ್ಲಿ ಇಟ್ಟ ಹೆಸರು ಯಾವುದು ?

6) ಒಂದೇ ಭಾಷೆ ಸಾಲದೇ ಪ್ರಬಂಧವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?

7) ಯಾವ ಕಾಯಿಲೆಯನ್ನು ಸಸಕಿಯ ತಾಯಿ ಅಣುಬಾಂಬು ಕಾಯಿಲೆ ಎಂದು ಕರೆದರು ?

8) 'ಮಾನಸ ಸರೋವರ' ಅಂಕಣವನ್ನು ಬರೆದವರು ಯಾರು ?

9) ಜನಕನ ರಾಜ್ಯ ಯಾವುದು ?

10) ಜನಕನಿಗೆ ಧನಸ್ಸನ್ನು ನೀಡಿದ ಋಷಿ ಯಾರು ?

11) ಮದುವೆಯ ಹಂದರ ಕಾವ್ಯಭಾಗವನ್ನು ಯಾವ ಕಾವ್ಯದಿಂದ ಆರಿಸಲಾಗಿದೆ ?

12) ಶಂಭುಕ ಯಾರು ?